ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ ಇನ್ನೂ ೧೦–೧೨ ಪ್ರಶ್ನೆಗಳಿವೆ. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಲೈಕುದ್ದೀನ್‌ರವರು ಸರ್ಕಾರದ ನೀತಿಯ ಬಗ್ಗೆ ಕೇಳುತ್ತಿದ್ದಾರೆ. ಆದರೆ ಅವರು ಮೈನಾರಿಟಿ ಆಟಿಟ್ಯೂಡ್ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರೇ ಮಂತ್ರಿಗಳಾಗಿದ್ದಾಗ ಇದನ್ನು ಮಾಡಿರುವುದಂ

ಶ್ರೀ ಧರ್ಮಸಿಂಗ್.—ಮಾನ್ಯ ಗೋಕಾಕ್ ವರದಿಯ ಬಗ್ಗೆ ಹೇಳುತ್ತಿಲ್ಲ. ಕನ್ನಡ ಭಾಷೆಯ ಬಗ್ಗೆ ಏನು ಹೇಳಂತಿಲ್ಲ. ಪೈಕೋರ್ಟ್ ತೀರ್ಪು ಏನು ಇದೆ ಅದರ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಸುಪ್ರೀಮ್ ಕೋರ್ಟಿಗೆ ಹೋಗಲಿಕ್ಕೆ ಏನು ಇದೆ?

ಶ್ರೀ ಎಂ. ಚಂದ್ರಶೇಖರ್.—ಇಬ್ಬರು ಇದರ ವಿರುದ್ಧವಾಗಿದ್ದರೆ ಒಬ್ಬರು ಪರವಾಗಿ ಹೇಳಿದ್ದಾರೆ. ಅದರ ಬಗ್ಗೆ ತೀರ್ಮಾನವಾಗಬೇಕಾಗಿದೆ.

ಶ್ರೀ ಧರ್ಮಸಿಂಗ್.—ಇದನ್ನು ಅರ್ಧಗಂಟೆ ಚರ್ಚೆಗೆ ಇಟ್ಟರೆ ಒಳ್ಳೆಯದೆಂದೂ ನಾನು ಹೇಳುತ್ತೇನೆ.

ಶ್ರೀ ಚಂದ್ರಶೇಖರ್.—ಶಿಕ್ಷಣ ಕ್ರಮ ಭಾಷಾವಿಜ್ಞಾನವಾಗಿರುವುದರಿಂದ ಈ ಸಮಯದಲ್ಲಿ ಅದನ್ನು ಚರ್ಚೆ ಮಾಡುವುದು ಸೂಕ್ತವಲ್ಲವೆಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರಾದ ಲೈಕುದ್ದೀನ್ ಅವರ ಪ್ರಶ್ನೆಗೆ ಉತ್ತರ ಕೊಟ್ಟಿರುವುದು ಸರಿಯಾಗಿಲ್ಲ.

ಶ್ರೀ ಹಿಂಡಸಗೇರಿ ಅಬ್ದುಲ್ ಹಕೀಮ್ ಮಹಮದ್ ಗೌಸ್.—ಕನ್ನಡ ಕಲಿಕೆಗ ಯಾರೂ ವಿರೋಧ ಮಾಡುತ್ತಿಲ್ಲ. ಈಗ ಕನ್ನಡವನ್ನು ಕಲಿಸತಕ್ಕಂಥ ಉಪಾಧ್ಯಾಯರುಗಳ ನೇಮಕವನ್ನೇ ಮಾಡುತ್ತಿಲ್ಲ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಬಹಳವಾಗಿ ಚರ್ಚೆ ಮಾಡಬೇಕಾಗಿರುವುದರಿಂದ, ಅರ್ಧಗಂಟೆ ಚರ್ಚೆಗೆ ಅವಕಾಶವನ್ನು ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಅರ್ಧಗಂಟೆಯ ಚರ್ಚೆಯಾಗಿ ಈ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಮದ್ದೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಹಂಳುಗಳ ಹಾವಳಿಯಿಂದ ಬೆಳಗಳ ನಾಶ

೫೫೭. ಶ್ರೀ ಜಿ. ಮಾದೇಗೌಡ (ಕರುಗಾವಲು).—ಮಾನ್ಯ ವ್ಯವಸಾಯ ಮತ್ತು ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮದ್ದೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಒಂದು ಜಾತಿಯ ಹಂಳುಗಳ ಹಾವಳಿಯಿಂದ ಬೆಳೆಗಳು ಸಂಪೂರ್ಣವಾಗಿ ನಾಶವಾಗಿ ರೈತರು ತೊಂದರೆಗೊಳಗಾಗಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮಂಗಳೇನು?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಸಚಿವರು).—

ಅ) ಹೌದು. ಕೆಲವು ಹಳ್ಳಿಗಳಲ್ಲಿ ಸ್ವಲ್ಪಮಟ್ಟಿಗೆ ಬೆಳೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಕೀಟವನ್ನು "ಹುಚ್ಚು ಇರುವೆ" (ಕ್ರೇಜಿ ಆಂಟ್) ಎಂದು ಗುರುತಿಸಲಾಗಿದೆ. ಈ ಕೀಟವು ಮದ್ದೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಮೊದಲ ಬಾರಿಗೆ ೧೯೮೪ ರಲ್ಲಿ ಕಂಡುಬಂದಿದ್ದು ಇತ್ತೀಚಿನ ವರದಿ ಪ್ರಕಾರ ೨೩ ಹಳ್ಳಿಗಳಲ್ಲಿ ಸುಮಾರು ೧೭೨೦ ಹೆಕ್ಟೇರ್ ಪ್ರದೇಶದಲ್ಲಿ ಈ ಕೀಟದ ಹಾವಳಿಯಿಂದ ಬೆಳೆ ನಷ್ಟವಾಗಿದಯೆಂದು ತಿಳಿದುಬಂದಿದೆ. ಈ ಕೀಟದ ಹತೋಟಿಗಾಗಿ ಕ್ಷೇತ್ರ ಪ್ರಯೋಗಗಳು ಮತ್ತು ಪ್ರಾತ್ಯಕ್ಷಿಕ ತಾಲ್ಲೂಕುಗಳನ್ನು ರೈತರ ಹೊಲಗಳಲ್ಲಿ ವಿಸ್ತರಿಸಲಾಗಿದೆ. ಜೊತೆಗೆ ವ್ಯವಸಾಯ ವಿಸ್ತರಣಾ ಸಿಬ್ಬಂದಿಯವರು ಕ್ರಮವಾಗಿ ಹಳ್ಳಿಗಳಲ್ಲಿ ರಾತ್ರಿ ಸಭೆ ನಡೆಸುವುದು, ಆಕಾಶವಾಣಿ ಮುಂತಾದ ಮಾಧ್ಯಮಗಳ ಮೂಲಕ ರೈತರಿಗೆ ಸಮಗ್ರ ಕೀಟ ನಿರ್ವಹಣೆಯ ಬಗ್ಗೆ ಸೂಕ್ತ ಸಲಹೆ ನೀಡುತ್ತಿದ್ದಾರೆ. ಹತೋಟಿ ಕೈಗೊಂಡ ಪ್ರದೇಶದಲ್ಲಿ ಕೀಟ ಬಾಧೆ ಕಡಿಮೆಯಾಗಿದೆ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ ದಿನಾಂಕ ೨೮-೪-೧೯೮೬ ರಂದು ಮಾನ್ಯ ಅಗ್ರಿಕಲ್ಚರ್ ಡೆ ರೆಕ್ಟರ್‌ರವರು ಒಂದು ಮೀಟಿಂಗನ್ನು ಕರೆದು ಕೀಟಗಳ ಹಾವಳಿಯನ್ನು ಯಾವರೀತಿ ತಡೆಗಟ್ಟಬೇಕು ಎನ್ನುವ ಬಗ್ಗೆ ಶಿಫಾರಸ್ಸು ಮಾಡಿದ್ದಾರೆ. ಸರ್ಕಾರಕ್ಕೆ ಅವರು ಏನು ಶಿಫಾರಸ್ಸು ಮಾಡಿದ್ದಾರೆನ್ನುವುದನ್ನು ಮಾನ್ಯ ಸಚಿವರು ದಯವಿಟ್ಟು ತಿಳಿಸುತ್ತಾರೆಯೇ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ೨೮.೪.೮೬ ರಂದು ಮಾನ್ಯ ಅಗ್ರಿಕಲ್ಚರ್ ಡೈರೆಕ್ಟರವರು ಕೀಟನಾಶದ ಬಗ್ಗೆ ಶಿಫಾರಸ್ಸು ಮಾಡಿ ವರದಿ ಕಳುಹಿಸಿರುತ್ತಾರೆಂದು ಹೇಳಿದ್ದಾರೆ. ಅದನ್ನು ನಾನು ಇನ್ನೂ ನೋಡಿಲ್ಲ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ, ಈ ಕೀಟದ ಹಾವಳಿ ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತಿದೆ. ಕಳೆದು ವರ್ಷ ಹತ್ತು ಹಳ್ಳಿಗಳಲ್ಲಿ ಕೀಟದ ಹಾವಳಿ ಹಬ್ಬಿದ್ದರೆ ಈ ವರ್ಷ ೨೪ ಹಳ್ಳಿಗಳಿಗೆ ಕೀಟದ ಹಾವಳಿ ಹಬ್ಬಿದೆ. ಇದು ಸರ್ಕಾರದ ಗಮನಕ್ಕೂ ಬಂದಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿರುತ್ತಾರೆನ್ನುವ ಬಗ್ಗೆಯೂ ಕೊಟ್ಟಿದ್ದಾರೆ. ''ಈ ಕೀಟದ ಹತೋಟಿಗಾಗಿ ಕ್ಷೇತ್ರ ಪ್ರಯೋಗಗಳು ಮತ್ತು ಪ್ರಾತ್ಯಕ್ಷಿಕೆ ತಾಕುಗಳನ್ನು ರೈತರ ಹೊಲಗಳಲ್ಲಿ ಏರ್ಪಡಿಸಲಾಗಿದೆ, ಜೊತೆಗೆ ವ್ಯವಸಾಯ ವಿಸ್ತರಣಾ ಸಿಬ್ಬಂದಿಯವರು ಕ್ರಮವಾಗಿ ಹಳ್ಳಿಗಳಲ್ಲಿ ರಾತ್ರಿ ಸಭೆ ನಡೆಸುವುದು. ಆಕಾಶವಾಣಿ ಮುಂತಾದ ಮಾಧ್ಯಮಗಳ ಮೂಲಕ ರೈತರಿಗೆ ಸಮಗ್ರ ಕೀಟ ನಿರ್ವಹಣೆಯ ಬಗ್ಗೆ ಸೂಕ್ತ ಸಲಹೆ ನೀಡುತ್ತಿದ್ದಾರೆ'' ಎಂದು ಹೇಳಿದ್ದೀರಿ. ಮಂತ್ರ ಹಾಕಿದರೆ ಮಾವಿನ ಕಾಯಿ ಬೀಳುತ್ತದೆಯೇ ಎಂದು ಕೇಳಂತ್ತೇನೆ ? ರೈತರ ಹಿತವನ್ನು ಕಾಪಾಡತಕ್ಕ ಸರ್ಕಾರದಲ್ಲಿ ಮಂತ್ರ ಹಾಕಿದರೆ ಮಾವಿನ ಕಾಯಿ ಉದುರುತ್ತದೆಯೇ ? ಕೀಟಗಳಿಂದ ರೈತರ ಕಷ್ಟ ನಿವಾರಣೆಯಾಗುತ್ತದೆಯೇ ? ೨೮-೪-೮೬ ರಂದು ನಿಮ್ಮ ಡೈರೆಕ್ಟರ್ ಸಭೆ ಕರೆದು ಎಕ್ಸ್‌ಪರ್ಟ್ಸ್ ಜೊತೆಗೆ ಮಾತನಾಡಿ ಚರ್ಚೆ ಮಾಡಿ, ಈ ರೋಗ ಬೇರೆ ಗಿಡಗಳಿಗೆ ಹರಡುವುದಕ್ಕೆ ಮುಂಚಿತವಾಗಿ ಕ್ರಮ ಕೈಗೊಳ್ಳಬೇಕು. ಇದಕ್ಕೆ ಒಂದು ಲಕ್ಷದ ೫೦ ಸಾವಿರ ರೂಪಾಯಿ ಹಣಬೇಕು, ಇಲ್ಲದಿದ್ದರೆ ಇದು ಇಡೀ ಜಿಲ್ಲೆಗೆ ಹರಡುತ್ತದೆಂದು ಅವರು ಶಿಫಾರಸ್ಸು ಮಾಡಿದ್ದಾರೆ.

ಅಧ್ಯಕ್ಷರು.—ನಿಮ್ಮ ಪ್ರಶ್ನೆ ಬಹಳ ಉದ್ದವಾಯಿತು.

ಶ್ರೀ ಜಿ. ಮಾದೇಗೌಡ —ಸಭೆ ಮಾಡುತ್ತಿದ್ದೇವೆ, ಜನಗಳಿಗೆ ತಿಳುವಳಿಕೆ ನೀಡುತ್ತಿದ್ದೇವೆ, ರೇಡಿಯೋ ಮೂಲಕ ಪ್ರಚಾರ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಇದರಿಂದ ಏನು ಪ್ರಯೋಜನವಾಗುವುದಿಲ್ಲ. ಆ ರೋಗವನ್ನು ಕಂಟ್ರೋಲ್ ಮಾಡಬೇಕಾದರೆ ಡೈರೆಕ್ಟರು ಕೇಳಿರುವಂತೆ ಒಂದು ಲಕ್ಷದ ೫೦ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು. ಈ ಹುಳುಗಳ ಹಾವಳಿಯಿಂದ ಜನರು ಸೂಡ ತಿರುಗಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಸಣ್ಣ ಹುಳುಗಳು ಭೂಮಿಯಲ್ಲಿ ಹರಿದು ಬೇರಿನಲ್ಲಿರತಕ್ಕ ಮಣ್ಣನ್ನು ಹೊರಗಡೆ ಎಳೆಯುತ್ತಿರುವುದರಿಂದ ಬೆಳೆ ನಷ್ಟವಾಗುತ್ತಿದೆ. ಇದು ಹಳ್ಳಿ ಹಳ್ಳಿಗೆ ಹಬ್ಬುತ್ತಿದೆ. ಎರಡು ವರ್ಷಗಳ ಹಿಂದೆ ಡೈರೆಕ್ಟರ್ ಒಂದು ಲಕ್ಷದ ೫೦ ಸಾವಿರ ರೂಪಾಯಿಗಳು ಈ ಹುಳುಗಳನ್ನು ಕಂಟ್ರೋಲ್ ಮಾಡುವುದಕ್ಕೆ ಬೇಕು ಎಂದು ಶಿಫಾರಸ್ಸು ಮಾಡಿದ್ದಾರಲ್ಲದೆ ಹಾರ್ಟಿಕಲ್ಚರ್, ಅಗ್ರಿಕಲ್ಚರ್ ಮತ್ತು ಸಿರಿಕಲ್ಚರ್ ಇಲಾಖೆಗಳವರು ಮುಂದಿನ ವರ್ಷವಾದರೂ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಶಿಫಾರಸು ಮಾಡಿದ್ದಾರೆ.

ಅಧ್ಯಕ್ಷರು.—ತಾವು ಉದ್ದಕ್ಕೆ ಭಾಷಣ ಮಾಡಿದರೆ ಹೇಗೆ? ನಿಮಗೆ ಉತ್ತರ ಬೇಕೋ ಬೇಡವೋ? ಸಪ್ಲಿಮೆಂಟರಿ ಪ್ರಶ್ನೆಯನ್ನು ನೇರವಾಗಿ ಕೇಳಬೇಕು?

ಶ್ರೀ ಜಿ. ಮಾದೇಗೌಡ.—ಮಂತ್ರ ಹಾಕಿದರೆ ಮಾವಿನಕಾಯಿ ಉದುರುತ್ತದೆಯೇ ? ರೈತರ ಉದ್ಧಾರವಾಗುತ್ತದೆಯೇ ? ಇನ್ನು ಮುಂದಕ್ಕೆ ಈ ರೋಗ ಹಬ್ಬದ ರೀತಿ ಕ್ರಮ ಕೈಗೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಭರವಸೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಿ ರಾಚಯ್ಯ.—ವ್ಯವಸಾಯಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳ ಬಗ್ಗೆ ಅಥವಾ ತೋಟಗಾರಿಕೆಯ ಬಗ್ಗೆ ಕ್ರಮ ತೆಗೆದುಕೊಳ್ಳಲು ಜಿಲ್ಲಾ ಪರಿಷತ್ತಿಗೆ ಅಧಿಕಾರ ಕೊಟ್ಟಿದ್ದೇವೆ. ಅದಕ್ಕೋಸ್ಕರ ಈ ವರ್ಷ ಜಿಲ್ಲಾ ಪರಿಷತ್ತಿಗೆ ನೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಹಣ ಕೊಟ್ಟಿದ್ದೇವೆ. ಆದ್ಯತೆ ಮೇಲೆ ಸಹ ಇದನ್ನು ತೆಗೆದುಕೊಳ್ಳಿ ಎಂದು ನಾನು ಅವರಿಗೆ ಬರೆಯುತ್ತೇನೆ.

ಶ್ರೀ ಜಿ. ಮಾದೇಗೌಡ.—ನಾನು ತಾರೀಖು ೨೮-೪-೮೬ ರಂದು ಮಂಡ್ಯ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳಿಗೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಪತ್ರ ಬರೆದಿದ್ದೇನೆ. ನಮ್ಮಲ್ಲಿ ಹಣ ಇಲ್ಲವೆಂದು ಅವರು ನಿರ್ದೇಶಕರಿಗೆ ಮತ್ತು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ನಿರ್ದೇಶಕರು ಮೀಟಿಂಗ್ ಕರೆದು ಒಂದು ಲಕ್ಷದ ೫೦ ಸಾವಿರ ರೂಪಾಯಿಗಳು ಬೇಕೆಂದು ನಿಮಗೆ ಪತ್ರ ಬರೆದಿದ್ದಾರೆ. ನೀವು ಆ

ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಆಕಾಶವಾಣಿ ಮೂಲಕ ಪ್ರಚಾರ ಮಾಡುತ್ತಿದ್ದೇವೆ, ತಿಳುವಳಿಕೆ ನೀಡುತ್ತಿದ್ದೇವೆಂದು ನೀವುಹೇಳುತ್ತಿದ್ದೀರಿ. ಬರೀ ಪ್ರಚಾರ ಮಾಡಿದರೆ, ತಿಳಿವಳಿಕೆ ನೀಡಿದರೆ ಹುಳುಗಳು ಸಾಯುತ್ತವೆಯೇ? ರೈತರು ಉದ್ದಾವಾಗುತ್ತಾರೆಯೇ? ನೀವು ಅಧಿಕಾರ ವಿಕೇಂದ್ರೀಕರಣ ಮಾಡಿದಂತೆ ಜಿಲ್ಲಾ ಪರಿಷತ್ತಿಗೆ ಬಿಡುಗಡೆ ಹಣವನ್ನು ಮಾಡುತ್ತಿದ್ದೀರಾ? ಜಿಲ್ಲಾ ಪರಿಷತ್ತಿನವರಿಗೆ ಒಂದು ಲಕ್ಷದ ೫೦ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಭರವಸೆ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಜಿಲ್ಲಾ ಪರಿಷತ್ತಿನವರಿಗೆ ಈ ಮೂರು ಇಲಾಖೆಗಳಿಗೆ ಸಂಬಂಧ ಪಟ್ಟ ಹಾಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಕೊಟ್ಟು ಇದನ್ನು ಕಾರ್ಯಗತ ಮಾಡಿ ಎಂದು ಬರೆಯುತ್ತೇನೆ.

ಶಾಲೆಯ ಪಠ್ಯಪುಸ್ತಕದಲ್ಲಿ ತಪ್ಪು ಮಾಹಿತಿ ಮುದ್ರಿಸಿರುವುದು

೫೦೯. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ),— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಪಠ್ಯ ಪುಸ್ತಕವಾದ ಕನ್ನಡ ಮಾಧ್ಯಮ ೫ನೇ ತರಗತಿಯ ಸಮಾಜ ಪುಸ್ತಕದ ಪೌರನೀತಿ ವಿಭಾಗದಲ್ಲಿ ವಿಧಾನ ಸಭೆಯ ಸದಸ್ಯರುಗಳ ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳ ಸಂಖ್ಯೆಯನ್ನು ಮತ್ತು ರಾಜ್ಯಗಳ ಹಾಗೂ ಕೇಂದ್ರಾಡಳಿತಗಳ ಸಂಖ್ಯೆಯನ್ನು ತಪ್ಪಾಗಿ ಮುದ್ರಿಸಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಕೂಡಲೇ ಈ ಪುಸ್ತಕದಲ್ಲಿರತಕ್ಕ ಎಲ್ಲಾ ಲೋಪದೋಷಗಳನ್ನು ಸರಪಡಿಸಿ ಸರಿಯಾದ ಮಾಹಿತಿಯನ್ನು ಎಲ್ಲಾ ಶಾಲೆಗಳಿಗೂ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಇ) ರೀತಿ ತಪ್ಪು ಮಾಹಿತಿಗಳನ್ನು ಮುದ್ರಿಸಲು ಕಾರಣರಾದವರ ಮೇಲೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು). —

ಅ) ಹೌದು.

ಆ) ಕೈಗೊಳ್ಳಲಾಗುವುದು.

ಇ) ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.— ಮಾನ್ಯ ಅಧ್ಯಕ್ಷರೆ, ಪಠ್ಯ ಪುಸ್ತಕದಲ್ಲಿ ತಪ್ಪಾಗಿ ಮುದ್ರಿತವಾಗಿದೆ. ಆದ್ದರಿಂದ ಈ ವರ್ಷ ವಿದ್ಯಾರ್ಥಿಗಳು ತಪ್ಪಾಗಿ ಉತ್ತರ ಬರೆದಿದ್ದರೆ ಅವರಿಗೆ ಮಾರ್ಕ್ಸ್ ಕೊಡಬೇಕು ಎಂದು ಮಾನ್ಯ ವಿದ್ಯಾ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈ ತರಹ ಸಂಕ್ಷಿಪ್ತವಾಗಿ ಕೇಳಬೇಕು.

ಶ್ರೀ ಎಂ. ಚಂದ್ರಶೇಖರ್.— ಅಧ್ಯಕ್ಷರೇ, ಇದರಲ್ಲಿ ಕೆಲವು ತಪ್ಪು ಮಾಹಿತಿಗಳಿರುವುದು ನಿಜ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಎಷ್ಟಿದ್ದಾರೆ, ರಾಜ್ಯಗಳು ಎಷ್ಟಿವೆ ಎಂಬ ಬಗ್ಗೆ ಕೊಟ್ಟಿರುವ ಅಂಕಿಅಂಶಗಳು ತಪ್ಪಾಗಿವೆ. ಅದನ್ನು ತಿದ್ದುತ್ತೇವೆ. ಅದನ್ನು ಡ್ರಾಫ್ಟ್ ಸ್ಟೇಜ್‌ನಲ್ಲೇ ತಿದ್ದಿದ್ದಿವ ಕೆಲಸವನ್ನು ಮಾಡಿಲ್ಲವಲ್ಲ ಎಂದು ಆಶ್ಚರ್ಯವಾಗುತ್ತಿದೆ. ಆದ್ದರಿಂದ ಮುಂದಿನ ಇಲಾಖೆಯವರು ಅಥವಾ ಇದನ್ನು ಯಾರು ತಯಾರು ಮಾಡಿದ್ದಾರೆ, ಅವರ ಬಗ್ಗೆ ವಿಚಾರ ಮಾಡುತ್ತೇವೆ, ಮತ್ತು ತಪ್ಪನ್ನು ತಿದ್ದುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಯ ಶಿಕ್ಷಕರ ವರ್ಗಾವಣೆ

೫೨೪. ಶ್ರೀ ಆರ್ ಎನ್. ನಾಯ್ಕ (ಭಟ್ಕಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಂ. ಡಿಪಿಎಆರ್, ೯ ಎಸ್‌ಟಿಆರ್, ಬೆಂಗಳೂರು ೫ನೇ ಸೆಪ್ಟೆಂಬರ್ ೧೯೫೮ ಮತ್ತು ದಿನಾಂಕ ೨೫ನೇ ಮೇ ೧೯೮೮ ರಂತೆ ರಾಜ್ಯದ ಪ್ರಾಥಮಿಕ ಶಿಕ್ಷಕರ ವರ್ಗಾವಣೆ ಹಾಗೂ ಪ್ರತಿ ನಿಯೋಜನೆಗೆ ಅನುಸರಿಸಬೇಕಾಗುತ್ತದೆಯೇ?